# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 318/2022

| | | |
|---|---|---|
| ಹೆಸರು | : | ಮಲ್ಲಿಕಾ |
| ಗಂಡನ ಹೆಸರು | : | ರಾಕೇಶ್ ರೈ |
| ಫ್ರಾಯ | : | 34 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಪಡಂಗಡಿ ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 28.01.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 3.10.2021 ರಂದು ಬೆಳಿಗ್ಗೆ ಸುಮಾರು 9 ಗಂಟೆಗೆ ಪಡಂಗಡಿ ಗ್ರಾಮದ ಬಿಯಂತ್ಯಾರು ಮನೆ ಎಂಬಲ್ಲಿ ನಮ್ಮ ಜಮೀನಿನಲ್ಲಿ ನಾನು, ಚಾಸಾ1 ಹಾಗೂ ಚಾಸಾ3 ರವರು ತೋಟದಲ್ಲಿ ಬೇಲಿ ಸರಿ ಮಾಡಿ ಗಿಡ ನೆಟ್ಟು ಕೆಲಸ ಮಾಡುತ್ತಿದ್ದಾಗ ನಮ್ಮ ಜೊತೆ ಕೆಲಸಕ್ಕೆ ಬಂದಿದ್ದ ಚಾಸಾ5 ಹಾಗೂ ನಮ್ಮ ಸಂಬಂಧಿಕರಾದ ಚಾಸಾ4 ರವರು ಇದ್ದರು. ಆಗ ಎದುರು ಮನೆಯವರಾದ ಆರೋಪಿತರು ಅಕ್ರಮವಾಗಿ ನಮ್ಮ ಜಾಗಕ್ಕೆ ಪ್ರವೇಶ ಮಾಡಿರುತ್ತಾರೆ. ಹಾಗೂ ಅವಾಚ್ಯ ಶಬ್ದಗಳಿಂದ ರಂಡೆ, ಬೇವರ್ಸಿ ಎಂದು ನಮ್ಮನ್ನು ಸುತ್ತುವರೆದು ಕೆಲಸ ಮಾಡದಂತೆ ನಮ್ಮನ್ನು ತಡೆದು ಗಂಡಸರು ಚಾಸಾ1 ರವರನ್ನು ದೂಡಿ ಹಾಕಿರುತ್ತಾರೆ. ನಾನು ಮತ್ತು ಚಾಸಾ3 ರವರು ತಡೆಯಲು ಹೋದಾಗ ಅವರ ಮನೆ ಹೆಂಗಸರು ನಮ್ಮನ್ನು ದೂಡಿ ಹಾಕಿ ರಂಡೆ ಬೇವರ್ಸಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಅಲ್ಲೆ ದೂರದಲ್ಲಿದ್ದ ಚಾಸಾ4 ರಿಂದ 6 ರವರು ಬರುವುದನ್ನು ಆರೋಪಿತರು ನೋಡಿ ನೀವು ಇನ್ನು ಮುಂದೆ ಜಾಗದ ತಕರಾರಿಗೆ ಬಂದರೆ ನಿಮ್ಮನ್ನು ಮುಗಿಸದೇ ಬಿಡುವುದಿಲ್ಲ ಎಂದು ಹೇಳಿ ಬೆದರಿಕೆ ಹಾಕಿ ಹೊರಟುಹೋಗಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ

ಹೇಳಿಕೆ ಪಡೆದುಕೊಂಡಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಮತ್ತು 4ನೇ ಆರೋಪಿತರನ್ನು ನೋಡಿ ಗುರುತಿಸಿದ್ದು, 1, 5 ರಿಂದ 10ನೇ ಆರೋಪಿತರು ಖುದ್ದು ವಿನಾಯಿತಿಗೆ ಅರ್ಜಿ ಸಲ್ಲಿಸಿರುವುದರಿಂದ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ 1, 2, 4 ರಿಂದ 10ನೇ ಆರೋಪಿತರ ಪರ ಶ್ರೀ. ಎಸ್.ಎಲ್.ಎ ವಕೀಲರಿಂದಃ

ಪೊಲೀಸರು ನನ್ನ ಹೇಳಿಕೆಯನ್ನು ದಿಃ 26.10.2021 ರಂದು ಪಡೆದುಕೊಂಡಿದ್ದು, ಆದರೆ ಎಲ್ಲಿ ಎಂಬುದು ನನಗೆ ನೆನಪಿಲ್ಲ. ಎಷ್ಟು ಹೊತ್ತಿಗೆ ಹೇಳಿಕೆ ಪಡೆದುಕೊಂಡಿದ್ದಾರೆಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನೊಟ್ಟಿಗೆ ಯಾರು ಇರಲಿಲ್ಲ. ಹೇಳಿಕೆಗೆ ಸಹಿ ಪಡೆದುಕೊಂಡಿದ್ದಾರಾ ಎಂದರೆ ನೆನಪಿಲ್ಲ. ನಿಮಗೆ ಮತ್ತು ಆರೋಪಿತರಿಗೂ ಎಷ್ಟು ವರ್ಷಗಳಿಂದ ತಕರಾರು ಇದೆ ಎಂದರೆ ಸಾಕ್ಷಿ ಚಾಸಾ3 ರವರು ಹೇಳುವ ಪ್ರಕಾರ ಅವರ ಅತ್ತೆಯ ಕಾಲದಿಂದಲೂ ಜಾಗಕ್ಕೆ ಸಂಬಂಧಪಟ್ಟ ತಕರಾರು ಇದೆ ಎಂದು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು ಮದುವೆಯಾಗಿ ಬಂದಾಗಿನಿಂದಲೂ ನಮ್ಮ ಮತ್ತು ಆರೋಪಿತರ ನಡುವೆ ಮಾತುಕತೆ ಇರುವುದಿಲ್ಲ. ನಿಮ್ಮ ಮನೆಯಿಂದ ಆರೋಪಿತರ ಮನೆ ಎಷ್ಟು ದೂರ ಎಂದರೆ ಸಾಕ್ಷಿ 400 ರಿಂದ 500 ಮೀಟರ್ ಅಂತರ ಎಂದು ಹೇಳುತ್ತಾರೆ. ನೀವು ಬೇಲಿ ಹಾಕಲು ಹೋಗಿದ್ದ ಜಾಗದ ಸರ್ವೇ ನಂಬರ್ ಗೊತ್ತಾ ಎಂದರೆ ಸಾಕ್ಷಿ ಸರ್ವೇ ನಂ. 84/1ಬಿ ಎಂದು ಹೇಳುತ್ತಾರೆ. ಆ ಸ್ಥಳದಿಂದ ಆರೋಪಿತರ ಮನೆ ಎಷ್ಟು ದೂರ ಎಂದರೆ ಸಾಕ್ಷಿ ಅಂದಾಜು 100 ಮೀಟರ್ ಒಳಗಡೆ ಎಂದು ಹೇಳುತ್ತಾರೆ. ಹತ್ತಿರದಲ್ಲಿ ಬೇರೆಯವರ ಮನೆ ಇದೆಯಾ ಎಂದರೆ ಹೌದು. ಗಲಾಟೆಯಾಗುವಾಗ ತುಂಬಾ ಜನ ಸೇರಿದ್ದರಾ ಎಂದರೆ ಇಲ್ಲ. ನೀವು ಆ ದಿನ ಜಾಗಕ್ಕೆ ಎಷ್ಟು ಗಂಟೆಗೆ ಹೋಗಿದ್ದೀರಿ ಎಂದರೆ 9 ಗಂಟೆಯ ಒಳಗೆ ಹೋಗಿದ್ದೇವೆ ಎಂದು ಹೇಳುತ್ತಾರೆ. ಎಲ್ಲರೂ ಒಟ್ಟಿಗೆ ಬಂದಿದ್ದಾರಾ ಅಥವಾ ಒಬ್ಬೊಬ್ಬರು ಒಂದೊಂದು ಕಡೆಯಿಂದ ಬಂದಿದ್ದಾರಾ ಎಂದರೆ ಸಾಕ್ಷಿ ಅದನ್ನು ನೋಡಿರುವುದಿಲ್ಲ ಆದರೆ ಬರುವಾಗ ಎಲ್ಲರೂ ಒಟ್ಟಿಗೆ ಬಂದಿದ್ದಾರೆ ಎಂದು ಹೇಳುತ್ತಾರೆ.

2. ನಾನು ಮತ್ತು ನನ್ನ ಗಂಡ 10 ರಿಂದ 20 ಮೀಟರ್ ದೂರದಲ್ಲಿ ಕೆಲಸ ಮಾಡುತ್ತಿದ್ದೆವು. ಆ ಸಮಯದಲ್ಲಿ ಚಾಸಾ5 ರವರು ಎಲ್ಲಿದ್ದರು ಎಂದರೆ ಸಾಕ್ಷಿ 100 ಮೀಟರ್ ದೂರದಲ್ಲಿ ಇದ್ದರು ಎಂದು ಹೇಳುತ್ತಾರೆ. ಚಾಸಾ5 ರವರು ದಿನನಿತ್ಯ ನಿಮ್ಮ ಮನೆಗೆ ಕೆಲಸಕ್ಕೆ ಬರುತ್ತಾರಾ ಎಂದರೆ ಇಲ್ಲ. ನಮ್ಮ ಮನೆಯಿಂದ ಚಾಸಾ5 ರವರ ಮನೆ ಅರ್ಧ ಕಿ.ಮೀ ರಿಂದ 1 ಕಿ.ಮೀ ದೂರದಲ್ಲಿರುತ್ತದೆ. ಚಾಸಾ4

ರವರು ನನ್ನ ಗಂಡನ ತಂಗಿಯ ಗಂಡ. ಚಾಸಾ4 ರವರು ಕಳಿಯಾ ಗ್ರಾಮ ಗೇರುಕಟ್ಟೆಯವರು. ಆ ದಿನ ಆದಿತ್ಯವಾರ ಆಗಿದ್ದ ಕಾರಣ ಚಾಸಾ4 ರವರು ನಮ್ಮ ಮನೆಗೆ ಬಂದಿದ್ದರು. ಚಾಸಾ6 ರವರು ಆ ದಿನ ದನಗಳಿಗೆ ಹಾಕುವ ಹಿಂಡಿಯನ್ನು ತಂದಿದ್ದರು, ಆದ ಕಾರಣ ಸ್ಥಳಕ್ಕೆ ಬಂದಿದ್ದರು. ಚಾಸಾ6 ರವರು ನಿಮ್ಮ ಮನೆಗೆ ಬಂದದ್ದು ಎಂದರೆ ಹೌದು. ನಿಮ್ಮ ಮನೆಯಿಂದ ತಕ್ಷೀರು ಸ್ಥಳ ಕಾಣುತ್ತದಾ ಎಂದರೆ ಹೌದು. ಆರೋಪಿತರು ಸ್ಥಳಕ್ಕೆ ಬರುವಾಗ ಸಾಧಾರಣ ಎಷ್ಟು ಗಂಟೆಯಾಗಿದೆ ಎಂದರೆ ಸಾಕ್ಷಿ 9 ಗಂಟೆಯಾಗಿದೆ ಎಂದು ಹೇಳುತ್ತಾರೆ. ಮೊದಲು ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ 4 ಮಂದಿ ದೂಡಿದ್ದಾರೆ ಅವರಲ್ಲಿ 1ನೇ ಆರೋಪಿ ಸಹ ಒಬ್ಬರು. ಚಾಸಾ1 ರವರನ್ನು ದೂಡಿದ ನಂತರ ಅವರನ್ನು ಎತ್ತಲು ಹೋದಾಗ ಹೆಂಗಸರು 5 ಜನ ನಮ್ಮನ್ನು ದೂಡಿರುತ್ತಾರೆ, ಅವರ ಯಾರು ಎಂದು ನನಗೆ ಗೊತ್ತಿಲ್ಲ. ಚಾಸಾ1 ರವರನ್ನು ದೂಡುವಾಗ ನಾನು ಮತ್ತು ಚಾಸಾ3 ರವರು ಒಟ್ಟಿಗೆ ಇದ್ದೆವು. ದೂಡಿ ಹಾಕಿದ ನಂತರ ಅಲ್ಲೆ ನಿಂತಿದ್ದರಾ ಅಥವಾ ಹೊರಟಹೋಗಿದ್ದರಾ ಎಂದರೆ ಸಾಕ್ಷಿ ಎಲ್ಲರೂ ಸಹ ನಮ್ಮನ್ನು ಸುತ್ತುವರೆದು ತಡೆದಿದ್ದಾರೆ ಎಂದು ಹೇಳುತ್ತಾರೆ. ಅವಾಚ್ಯ ಶಬ್ದಗಳಿಂದ ನಿಮ್ಮನ್ನು ಯಾರು ಬೈದಿದ್ದಾರೆ ಎಂದರೆ ಸಾಕ್ಷಿ ಹೆಂಗಸರು ಬೈದಿದ್ದಾರೆ, ಯಾರು ಬೈದಿದ್ದು ಎಂದು ಹೇಳಲು ಆಗುವುದಿಲ್ಲ. ದೂಡಿ ಹಾಕಿದ ನಂತರ ನಿಮಗೆ ಮತ್ತು ಚಾಸಾ1 ರವರಿಗೆ ಪೆಟ್ಟಾಗಿತ್ತಾ ಎಂದರೆ ಸಾಕ್ಷಿ ಚಾಸಾ1 ಮತ್ತು 3 ರವರಿಗೆ ಸ್ವಲ್ಪ ಮೈಕೈ ನೋವಾಗಿರುತ್ತದೆ ಎಂದು ಹೇಳುತ್ತಾರೆ. ದೂಡಿ ಹಾಕಿದಾಗ ಚಾಸಾ1 ರವರು ಕವಚಿ ಬಿದ್ದಿರುತ್ತಾರಾ ಅಥವಾ ಹಿಮ್ಮುಖವಾಗಿ ಬಿದ್ದಿರುತ್ತಾರಾ ಎಂದರೆ ಹೇಳಲು ಆಗುವುದಿಲ್ಲ. ದೂಡಿ ಹಾಕಿರುವುದನ್ನು ಹೊರತುಪಡಿಸಿ ಬೇರೆ ಏನು ಮಾಡಿರುವುದಿಲ್ಲ.

3. ದೂಡಿ ಹಾಕುವಾಗ ಚಾಸಾ4 ಮತ್ತು 5 ರವರು ಎಷ್ಟು ದೂರದಲ್ಲಿ ಇದ್ದರು ಎಂದರೆ ಸಾಕ್ಷಿ ತಕ್ಷೀರು ಸ್ಥಳದಿಂದ 100 ಮೀಟರ್ ದೂರದಲ್ಲಿ ಇದ್ದರು ಎಂದು ಹೇಳುತ್ತಾರೆ. ದೂಡಿ ಹಾಕಿದಾಗ ನೀವು ಮತ್ತು ಚಾಸಾ1, 3 ರವರು ಬೊಬ್ಬೆ ಹಾಕಿದ್ದೀರಾ ಎಂದರೆ ಹೌದು. ಬೊಬ್ಬೆ ಕೇಳಿದ ನಂತರ ಬಂದಿದ್ದಾರೆ ಎಂದರೆ ಹೌದು. ಅಲ್ಲದೆ ಆ ಸಮಯದಲ್ಲಿ ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಯಾರು ಬೈದಿರುತ್ತಾರೆ ಎಂದರೆ ಸಾಕ್ಷಿ 1ನೇ ಆರೋಪಿ ಬೈದಿದ್ದಾರೆ ಎಂದು ಹೇಳುತ್ತಾರೆ. ಚಾಸಾ4 ಮತ್ತು 5 ರವರು ನಮ್ಮ ಬೊಬ್ಬೆ ಕೇಳಿ 100 ಮೀಟರ್ ದೂರದಿಂದ ಬರುವಾಗ ಆರೋಪಿತರು ನಮಗೆ ಬೈದು ಹೆದರಿಸಿ ಹೊರಟುಹೋಗಿರುತ್ತಾರೆ. ಇಷ್ಟೆಲ್ಲಾ ಆಗುವಾಗ ಸಾಧಾರಣ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ ಬೆಳಿಗ್ಗೆ 10 ಗಂಟೆಯ ಒಳಗೆ ಆಗಿತ್ತು ಎಂದು ಹೇಳುತ್ತಾರೆ. ಪೊಲೀಸರು ನಿಮ್ಮನ್ನು ಎಷ್ಟು ಬಾರಿ ವಿಚಾರಣೆ ಮಾಡಿದ್ದಾರ ಎಂದರೆ ಸಾಕ್ಷಿ ಒಂದು ಬಾರಿ ಮಾಡಿದ್ದಾರೆ, ಉಳಿದಿದ್ದು

ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. 10 ಜನ ಆರೋಪಿತರು ಒಂದೇ ಮನೆಯವರಾ ಅಥವಾ ಬೇರೆ ಬೇರೆ ಮನೆಯವರಾ ಎಂದರೆ ಸಾಕ್ಷಿ ಬೇರೆ ಬೇರೆ ಮನೆಯಲ್ಲಿ ಇದ್ದಾರೆ, ಎಲ್ಲರೂ ಅಣ್ಣತಮ್ಮಂದಿರು, ಆದರೆ 2ನೇ ಆರೋಪಿಯ ಮನೆ ಸ್ವಲ್ಪ ದೂರದಲ್ಲಿ ಇದೆ ಎಂದು ಹೇಳುತ್ತಾರೆ. ನನ್ನ ಗಂಡನ ಮೇಲೆ ಆರೋಪಿತರು ನೀಡಿದ ಪ್ರಕರಣ ಬಾಕಿ ಇದೆ ಎಂದರೆ ಸರಿ. ನಮ್ಮ ಮೇಲೂ ಸಹ ಒಂದು ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ನಾವು ಮೊದಲು ದೂರು ನೀಡಿದ ನಂತರ ಆರೋಪಿತರು ದೂರು ನೀಡಿರುತ್ತಾರೆ. ಪ್ರಕರಣ ದಾಖಲಾಗುವ 3 – 4 ತಿಂಗಳ ಹಿಂದೆ ಇದೇ ರೀತಿ ಜಗಳವಾಗಿತ್ತು, ಆಗ ದೂರು ಕೊಟ್ಟಿದ್ದೆವು, ಪೊಲೀಸರು ಎಚ್ಚರಿಕೆ ಕೊಟ್ಟಿದ್ದರು, ಆಗ 1ನೇ ಆರೋಪಿ ವಿರುದ್ಧ ಮಾತ್ರ ಪ್ರಕರಣ ದಾಖಲು ಮಾಡಿದ್ದರು. ಆ ಸಮಯದಲ್ಲಿ ಆರೋಪಿತರು ನಮ್ಮ ಮೇಲೆ ಯಾವುದೇ ದೂರನ್ನು ನೀಡಿರುವುದಿಲ್ಲ. ಜಾಗದ ವಿಚಾರಕ್ಕೆ ಸಂಬಂಧಪಟ್ಟಂತೆ ಇದೇ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣ ಬಾಕಿ ಇದೆ ಎಂದರೆ ಸರಿ. ನಾನು ಹೇಳಿದ ಪ್ರಕಾರ ಆರೋಪಿತರು ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಮಗೆ ಮತ್ತು ಆರೋಪಿತರಿಗೆ ಆಗದ ಕಾರಣ ನಾನು ಮತ್ತು ಚಾಸಾ1 ಹಾಗೂ 3 ರವರು ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)